# ಜ್ಯೋತಿಃಶಾಸ್ತ್ರ

ವೇದಾಂಗಗಳು ಆರು. ಅವುಗಳಲ್ಲಿ ಜ್ಯೋತಿಃಶಾಸ್ತ್ರವೂ ಒಂದು. ಈ ಶಾಸ್ತ್ರದ ಬಗೆಗೆ ಆಧುನಿಕರಲ್ಲಿ ಭಿನ್ನ ಬಗೆಯ ಅಭಿಪ್ರಾಯಗಳಿವೆ. ಆದರೆ, ಸಾವಿರಾರು ವರ್ಷಗಳಿಂದ ಈ ಶಾಸ್ತ್ರವು ಬೆಳೆಯುತ್ತಾ ಬಂದಿದೆ. ಈ ಶಾಸ್ತ್ರದ ಪೂರ್ವಾಪರಗಳನ್ನು ಶುದ್ಧ ಮನಸ್ಸಿನಿಂದ ತಿಳಿಯುವ ಯತ್ನವನ್ನು ಮಾಡೋಣ. 'ಜ್ಯೋತಿಃ ಎಂಬುದಕ್ಕೆ ಪ್ರಕಾಶವೆಂದೂ ಪ್ರಕಾಶವುಳ್ಳ ವಸ್ತುವೆಂದೂ ಅರ್ಥ. ವಿಶ್ವವ್ಯಾಪಿ ಅಥವ ವಿಶ್ವಾತೀತ ಎನಿಸಬಹುದಾದ ಚೇತನ ಎಲ್ಲೆಡೆಯೂ ಉಂಟಷ್ಟೆ. ಆದರೆ, ಇದನ್ನು ಗುರುತಿಸಲು ವಿಶಿಷ್ಟ ಸಾಧಕರಿಗೆ ಮಾತ್ರ ಸಾಧ್ಯ. ಈ ಸಂಗತಿಯನ್ನು ಆರ್ಷಪರಂಪರೆಯು ನಮ್ಮ ಗಮನಕ್ಕೆ ತಂದುಕೊಟ್ಟಿದೆ. ಯಜ್ಞದಲ್ಲಿ ಪ್ರಧಾನವಾದ ಆಹುತಿಗಳನ್ನು ಅಗ್ನಿ, ಸೂರ್ಯ, ಇಂದ್ರರು ಸ್ವೀಕರಿಸುವುದುಂಟಷ್ಟೆ. ಇವರು ಪ್ರಕೃತಿಯ ವಿಶಿಷ್ಟ ವಸ್ತುಗಳೆಂಬುದನ್ನು ನಾವು ಮರೆಯಕೂಡದು. ಭಗವದ್ಗೀತೆಯಲ್ಲಿ 'ವಿಭೂತಿಮತ್ತಾದ್ದೆಲ್ಲವೂ ನಾನು ಎಂಬ ಮಾತಿದೆ'. ವಿಭೂತಿ ಎಂದರೆ ವಿಶಿಷ್ಟಶಕ್ತಿಯೆಂದೇ ಅರ್ಥ. ಈ ತತ್ತ್ವಕ್ಕೆ ಅನುಸಾರವಾಗಿ ಸೂರ್ಯಾದಿಗ್ರಹಗಳನ್ನೂ ಅಶ್ವಿನ್ಯಾದಿ ನಕ್ಷತ್ರಗಳನ್ನೂ ಪ್ರಧಾನವಾಗಿಟ್ಟು ಅವುಗಳ ಚಲನೆಗಳ ಮೂಲಕ ದೇಶಕಾಲಗಳ ಮೇಲಿನ ಪರಿಣಾಮವನ್ನು ಗ್ರಹಿಸುವ ಶಾಸ್ತ್ರವೇ ಜ್ಯೋತಿಃಶಾಸ್ತ್ರವೆಂದು ಸ್ಥೂಲವಾಗಿ ಸೂತ್ರಿಸಬಹುದು. ಇದರ ಪರಿಣಾಮ ಸಸ್ಯಪ್ರಾಣಿಗಳ ಮೇಲೆ ಆಗುವುದನ್ನು ನಾವು ಕಾಣಬಹುದು. ಸಸ್ಯಗಳಿಗೆ ಅಗತ್ಯವಾದ ಮಳೆಬಿಸಿಲುಗಳು ಗ್ರಹ ನಕ್ಷತ್ರಗಳನ್ನು ಅನುಸರಿಸಿಯೇ ಇರುತ್ತವೆ. ಯೋಗ್ಯ ನಕ್ಷತ್ರಗಳ ಬದಲಾಗಿ ಬಂದ ಮಳೆಯಿಂದ ಸಸ್ಯಗಳ ಆರೋಗ್ಯ ಕೆಡುತ್ತದೆ. ಯೋಗ್ಯನಕ್ಷತ್ರಗಳ ಕಾಲದಲ್ಲಿ ಮಳೆಬಾರದೆ ಹೋದರೆ, ನೀರಿನ ಬಲ ಸಮರ್ಪಕವಾಗಿ ಉಳಿಯಲಾರದು. ಅಮಾವಾಸ್ಯೆ–ಹುಣ್ಣಿಮೆಗಳನ್ನು ಗಮನಿಸದೆ ಮರಗಳನ್ನು ಕಡಿದು ಉಪಕರಣಗಳನ್ನು ತಯಾರಿಸಿದರೆ, ಅವು ಹೆಚ್ಚುಕಾಲ ಬಾಳುವುದಿಲ್ಲ. ಕೆಲವು ಆಯುರ್ವೇದೀಯ ಸಸ್ಯಗಳ ಆರೋಗ್ಯಕಾರಕ ಗುಣಗಳು ತಿಥಿ, ಗ್ರಹಣ ಮೊದಲಾದವುಗಳ ಮೇಲೆ ಅವಲಂಬನಗೊಂಡಿರುತ್ತವೆ. ಉನ್ಮಾದದಂತಹ ರೋಗವು ಶುಕ್ಲಪಕ್ಷದಲ್ಲಿಯೇ ಪ್ರಬಲವಾಗುವುದರಿಂದ ಇಂಗ್ಲಿಷಿನಲ್ಲಿ ಇದಕ್ಕೆ ಐu ಟಿಚಿಛಿಥಿ (ಲೂನಸಿ–ಚಂದ್ರಸಂಬಂಧಿ ರೋಗ) ಎಂಬ ಹೆಸರು ಬಂದಿದೆ. ಹೀಗೆ ಹಲವು ನಾಗರಿಕತೆಗಳಲ್ಲಿ ಜ್ಯೋತಿಷಾಂಶಗಳು ಹಾಸುಹೊಕ್ಕಾಗಿರುವುದನ್ನು ನಾವು ತಳ್ಳಿಹಾಕುವಂತಿಲ್ಲ. ನಮ್ಮ ದೇಹಾರೋಗ್ಯದ ಮೇಲೆ ಪರಿಣಾಮ ಬೀರಬಲ್ಲ ಶಕ್ತಿಗಳು ಮನಸ್ಸು ಮುಂತಾದ ಸೂಕ್ಷ್ಮಅಂಶಗಳ ಮೇಲೂ ಪರಿಣಾಮ ಬೀರಿಯೇ ಬೀರುತ್ತವೆ. ಇಂಥವು ಜ್ಯೋತಿಃಶಾಸ್ತ್ರಕ್ಕೆ ಸಂಬಂಧಪಡುವ ಪ್ರತ್ಯಕ್ಷಸಿದ್ಧ ಅಂಶಗಳು.

ಪ್ರತಿಯೊಂದು ಧಾರ್ಮಿಕ ಆಚರಣೆಯ ಸಂದರ್ಭಗಳಲ್ಲೂ 'ದೇಶಕಾಲ ಸಂಕೀರ್ತನ ಎಂಬ ಅಂಶ ಉಂಟಷ್ಟೆ. ಇದಕ್ಕೆ ಜ್ಯೋತಿಷವೇ ಆಧಾರ. ರಾತ್ರಿಹಗಲುಗಳು ಪ್ರತಿಯೊಬ್ಬನ ಜೀವನದಲ್ಲೂ ಅನುಭವಕ್ಕೆ ಬರುತ್ತವೆ. ಇವು ದಿನವೆಂಬ ಕಾಲಿಕ ಘಟಕದ ಕಲ್ಪನೆಗೆ ಕಾರಣವಾಗಿವೆ. ಈ ಕಲ್ಪನೆಯು ಧಾರ್ಮಿಕ–ಲೌಕಿಕ ಸಂಬಂಧವಾದ ಎರಡೂ ರೀತಿಯ ವ್ಯವಹಾರಕ್ಕೆ ತುಂಬಾ ಅತ್ಯಗತ್ಯ. ಇದರ ಗುಣನದಿಂದ ವಾರ, ಪಕ್ಷ, ಮಾಸ, ಋತು, ಆಯನ, ಸಂವತ್ಸರಗಳೆಂಬ ಘಟಕಗಳು ರೂಪಿತವಾಗಿವೆ. ಅರುವತ್ತು ಸಂವತ್ಸರಗಳ ಒಂದು ವೃತ್ತ ಸಾಮಾನ್ಯ ಮನುಷ್ಯನ ಸಕ್ರಿಯ ಜೀವನಕ್ಕೆ ಸಂವಾದಿಯಾಗಿದೆ. ಇದಕ್ಕಿಂತಲೂ ದೊಡ್ಡದು ಯುಗ್ಮ, ಮನ್ವಂತರ, ಕಲ್ಪಗಳನ್ನು ಶಾಸ್ತ್ರಕಾರರು ರೂಪಿಸಿದ್ದಾರೆ. ಬೆಳೆ–ಆರೋಗ್ಯದಂಥ ಲೌಕಿಕ ಅಂಶಗಳಿಗೆ ಕಾಲದ ಯೋಗ್ಯತೆ–ಅಯೋಗ್ಯತೆಗಳು ಇರುವಂತೆಯೇ; ಧಾರ್ಮಿಕ ಆಚರಣೆಗಳಿಗೂ ಉಂಟು. ಇದರಿಂದ ಮುಹೂರ್ತ ಎಂಬಂಥ ಕಲ್ಪನೆಗಳು ರೂಪುಗೊಂಡಿವೆ. ಇಷ್ಟು ಹೇಳಿದರೂ ಆಧ್ಯಾತ್ಮಿಕತೆ ಇವೆಲ್ಲವನ್ನೂ ಮೀರಿ ನಿಲ್ಲಬಹುದು. ಸಾಧಕನಾಗಿ ಋಷಿತ್ವವನ್ನು ಸಂಪಾದಿಸಿದವನು ದೇಶಕಾಲಗಳ ಅಪ್ರಶಸ್ತಿಯನ್ನು ಪ್ರಶಸ್ತಗೊಳಿಸಿಬಿಡಬಹುದು. ಹೀಗಾಗಿ, ವ್ಯಕ್ತಿದೋಷದಿಂದ ಪ್ರಶಸ್ತಿಯ ಪರಿಣಾಮವೂ ಕಾಣಿಸದ ಸಂದರ್ಭಗಳೂ ಇರಬಹುದು.

ನಾವು ಕಾರ್ಯಕಾರಣಗಳನ್ನು ಪ್ರಯೋಗಶಾಲೆಯ ಮೂಲಕ ತಿಳಿಯಲು ಯತ್ನಿಸುತ್ತೇವೆ. ಕಾರ್ಯ–ಕಾರಣ ನಿಷ್ಕೃಷ್ಟತೆಯನ್ನು ಧಾರ್ಮಿಕ ಮಾತ್ರವಲ್ಲ, ಸಾಂಸ್ಕೃತಿಕ ಸಂದರ್ಭಗಳಲ್ಲೂ ತೋರಿಸಲು ಸಾಧ್ಯವಿಲ್ಲ. ಸಂಗೀತ–ಶಿಲ್ಪ ಮತ್ತು ಸಾಹಿತ್ಯದಂಥ ಸಂದರ್ಭದಲ್ಲಿ ಮೂಢತೆಯನ್ನು ಆರೋಪಿಸುವುದಿದ್ದರೆ ಎಲ್ಲಾ ಸಂದರ್ಭಗಳಲ್ಲಿಯೂ ಆರೋಪಿಸಬೇಕಾಗುತ್ತದೆ. ಸತ್ಯ, ನ್ಯಾಯ ಇವು ಯಾವ ಸಮಾಜದಲ್ಲಾದರೂ ನಿಷ್ಕೃಷ್ಟ ಪರಿಣಾಮವನ್ನು ಕೊಡುತ್ತವೆಯೆ? ಅಸತ್ಯವಂತರು ಲೌಕಿಕವಾಗಿ ಸುಖಿಗಳಾಗಿರುವ ಸಂದರ್ಭಗಳುಂಟು. ಅದೇ ರೀತಿ ಸತ್ಯವಂತರು ಜೀವನವಿಡಿ ನರಳುವ ಸಂದರ್ಭಗಳೂ ಉಂಟು. ಪ್ರಯೋಗಶಾಲೆಗೆ ಸೀಮಿತವಾಗದ ಎಷ್ಟೋ ಅಂಶಗಳು ಸಾಂಸ್ಕೃತಿಕ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಉಳಿದು ಬಂದಿವೆ. ಇವುಗಳನ್ನು ಶೂನ್ಯವೆಂದು ತಿಳಿಯುವುದು ವೈಚಾರಿಕತೆಗೂ ಸಂವೇದನೆಗೂ ಸಮಂಜಸವಲ್ಲ. ಈ ಹಿನ್ನೆಲೆಯಲ್ಲಿ ಚಿಂತಿಸಿದರೆ ಜ್ಯೋತಿಷಾಧ್ಯಯನವು ಗಣಿತಭಾಗ–ಫಲಭಾಗಗಳಿಗೆ ಮಾತ್ರ ಸೀಮಿತಗೊಂಡು ವೇದಾಂಗತ್ವವೇ ಮರೆತುಹೋಗಿದೆ. ಆರ್ಯಭಟೀಯವು ಜ್ಯೋತಿಷದ ಗುರಿ ಆಧ್ಯಾತ್ಮಿಕವೆಂದೇ ಹೇಳಿದೆ. ಗ್ರಹಾಧಿಪನಾದ ಸೂರ್ಯನನ್ನು ಪರತತ್ತ್ವದೊಂದಿಗೆ ಸಮೀಕರಿಸಿದೆ. ಜ್ಯೋತಿಷವು ಒಂದೇ ಸಾಧನವೆಂದು ಆರ್ಷಪರಂಪರೆ ಯಾವತ್ತೂ ತಿಳಿದಿಲ್ಲ. ಅನೇಕ ಅಂಶಗಳಿಗೆ ಪೂರಕವಾಗಿ ಜ್ಯೋತಿಷವು ಇದೆ. ಆಧುನಿಕ ಖಗೋಳವಿಜ್ಞಾನದಲ್ಲಿ ನೂತನ ಸಂಶೋಧನೆಗಳು ನಡೆಯುತ್ತಿವೆಯಷ್ಟೆ. ಅವು ಜ್ಞಾನದ ವಿಸ್ತರಣೆಗಳೆಂದೇ ನಾವು ತಿಳಿಯಬೇಕು. ಪ್ರಾಚೀನ ಋಷಿವಚನಕ್ಕೆ ಪೂರಕವಾಗಿಯೇ ಅವು ಇರಬಲ್ಲವು. ಗ್ರಂಥಾಧ್ಯಯನದ ಜೊತೆ ಸಾಧನೆಯೂ ಬೇಕಷ್ಟೆ. ಇದರ ಜತೆಗೆ ಅನುಷ್ಠಾನವೂ ನಿರ್ಮಲಬುದ್ಧಿಯೂ ಬೇಕು! ಜ್ಯೋತಿಃಶಾಸ್ತ್ರ ಹೊರಗೂ ಒಳಗೂ ಬೆಳಗಬಲ್ಲುದೆಂಬ ನಿಶ್ಚಿತಜ್ಞಾನ ತಿಳಿದಾಗ ಮಾತ್ರ ವೇದಾಂಗತ್ವಕ್ಕೆ ಬೆಲೆಬರುತ್ತದೆ.

■ ಪುರಂಜೀವಿ

## ಮಾತೇ ಮುತ್ತು

- ಮರ ತಾನಾಗಿಯೇ ಬೆಳೆಯುತ್ತದೆ. ಆ ರೀತಿ ಮನುಷ್ಯ ಬೆಳೆಯಲಾರ. ನಮ್ಮ ಬದುಕು ಆರಂಭವಾಗುವ ಸಾವಿರಾರು ವರ್ಷಗಳ ಮುನ್ನ ಇಲ್ಲಿ ಜೀವರಾಶಿ ಇತ್ತು ಎಂದು ತಿಳಿದರೆ ಸಾಕು.

  –ಶಿವರಾಮ ಕಾರಂತ

- ಕೊಟ್ಟು ಕೆಟ್ಟವರಿಲ್ಲ, ತಿಂದು ಬದುಕಿದವರಿಲ್ಲ. ಕೊಟ್ಟು ಕುದಿಯಲು ಬೇಡ, ಕೊಟ್ಟಾಡಿಕೊಳಬೇಡ.

  –ಸರ್ವಜ್ಞ

- ನಿಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಪೂರೈಸಿ ಶುದ್ಧ ಚಾರಿತ್ರ್ಯವನ್ನು ರೂಢಿಸಿಕೊಳ್ಳಬೇಕು. ಕರ್ತವ್ಯ ಮಾಡಿದರೆ ಕರ್ತವ್ಯಭಾರದಿಂದ ಪಾರಾಗುತ್ತೇವೆ.

  –ಸ್ವಾಮಿ ವಿವೇಕಾನಂದ

- ನನ್ನ ಅಜ್ಜ ಯಾರೆಂದು ನನಗೆ ಗೊತ್ತಿಲ್ಲ; ಆದರೆ ಆತನ ಮೊಮ್ಮಗ ಏನಾಗಬೇಕೆಂದು ನನಗೆ ಗೊತ್ತಿದೆ.

  –ಅಬ್ರಹಾಂ ಲಿಂಕನ್

- ಮರದ ಮೇಲೆ ಕುಳಿತ ಹಕ್ಕಿಗೆ ಕೊಂಬೆ ಮುರಿದು ಬೀಳುವ ಭಯವಿರದು. ಅದು ನಂಬಿರುವುದು ತನ್ನ ರೆಕ್ಕೆಗಳನ್ನೇ ಹೊರತು ಕೊಂಬೆಯನ್ನಲ್ಲ.

  –ಕುವೆಂಪು

- ಗುಣಾತ್ಮಕವಾಗಿ ಯೋಚಿಸುವುದಿಲ್ಲ ಎಂದಾದಲ್ಲಿ ನೀವು ಕನಿಷ್ಠ ಪಕ್ಷ ಸುಮ್ಮನಾದರೂ ಇರಿ.

  –ಜೋಯೆಲ್ ಆಸ್ಟಿನ್